ANNEXURE-1

ಕರ್ನಾಟಕ ಧನವಿನಿಯೋಗ. ವಿಧೇಯಕ 1986

(ವಿಧಾನ ಸಭೆ ವಿಧೇಯಕ, 1986ರ ಕ್ರಮ ಸಂಖ್ಯೆ 22)

1985-86ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

1985-86ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುತ್ತದೆ.

ಇದು ಭಾರತ ಗಣರಾಜ್ಯದ ಮೂವತ್ತೇಳನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ.

1. ಸಂಕ್ಷಿಪ್ತ ಹೆಸರು.—ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ ಅಧಿನಿಯಮ, 1986 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 1985-86ನೇ ಹಣಕಾಸು ವರ್ಷಕ್ಕಾಗಿ 201,38,16,000 ರೂಪಾಯಿಗಳ ನೀಡಿಕೆ.—ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 1985-86ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಸುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿದ್ದು ಮೊತ್ತದಲ್ಲಿ ಇನ್ನೂರ ಒಂದು ಕೋಟಿ ಮೂವತ್ತೆಂಟು ಲಕ್ಷದ ಹದಿನಾರು ಸಾವಿರ ರೂಪಾಯಿಗಳಿಗೆ ವಿಸ್ತಾರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

3. ಧನವಿನಿಯೋಗ.—ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು, ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ವಿಧಾನ ಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
			ಮೀರದ ಮೊಬಲಗು		
1	2		3	4	5
1	ಭೂ ಮತ್ತು ಜಲ ಸಂರಕ್ಷಣೆ ಮತ್ತು ಕೃಷಿ (ತೋಟಗಾರಿಕೆ ಮತ್ತು ಬರಗಾಲ ಪೀಡಿತ ಪ್ರದೇಶ ಕಾರ್ಯಕ್ರಮಗಳನ್ನು ಹೊರತುಪಡಿಸಿ)	ರಾಜಸ್ವ	2,83,25,000	...	2,83,25,000
		ಬಂಡವಾಳ	82,97,000	...	82,97,000
2	ತೋಟಗಾರಿಕೆ	ರಾಜಸ್ವ	9,00,000	...	9,00,000
3	ಪಶು ಸಂಗೋಪನೆ ಮತ್ತು ಹೈನು ಅಭಿವೃದ್ಧಿ	ರಾಜಸ್ವ	2,25,00,000	...	2,25,00,000
5	ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯವನ್ನು ಹೊರತುಪಡಿಸಿ)	ರಾಜಸ್ವ	2,84,000	...	2,84,000
		ಬಂಡವಾಳ	2,94,01,000	...	2,94,01,000
6	ಗಣಿ ಮತ್ತು ಭೂ ವಿಜ್ಞಾನ	ರಾಜಸ್ವ	1,000	...	1,000
7	ಚಿಕ್ಕ ಪುಟ್ಟ ಉದ್ಯಮಗಳು	ರಾಜಸ್ವ	62,00,000	...	62,00,000
		ಬಂಡವಾಳ	42,46,000	...	42,46,000

1	2		3	4	5
8	ರೇಷ್ಮೆ ವ್ಯವಸಾಯ	ರಾಜಸ್ವ	5,48,00,000	30,000	5,48,30,000
		ಬಂಡವಾಳ	4,50,00,000	...	4,50,00,000
10	ಉಚ್ಚ ಶಿಕ್ಷಣ	ರಾಜಸ್ವ	2,92,77,000	...	2,92,77,000
11	ಯುವಜನ ಸೇವೆಗಳು	ರಾಜಸ್ವ	32,53,000	...	32,53,000
12	ಕಲೆ, ಸಂಸ್ಕೃತಿ ಮತ್ತು ಕನ್ನಡ ಅಭಿವೃದ್ಧಿ	ರಾಜಸ್ವ	1,20,00,000	...	1,20,00,000
13	ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ	ರಾಜಸ್ವ	40,01,000	...	40,01,000
14	ಪ್ರೌಢ ಶಿಕ್ಷಣ	ರಾಜಸ್ವ	8,67,69,000	...	8,67,69,000
...	ಬಡ್ಡಿ ಸಂದಾಯಗಳು	ರಾಜಸ್ವ	...	1,000	1,000
...	ಆಂತರಿಕ ಋಣ, ಕೇಂದ್ರ ಸರ್ಕಾರದಿಂದ ಸಾಲ ಮತ್ತು ಇತರ ರಾಜ್ಯ ತೀರಿಕೆ.	ಬಂಡವಾಳ	...	2,000	2,000
15	ವರಮಾನ ತೆರಿಗೆ, ವೃತ್ತಿ ಮಾರಾಟ ಮತ್ತು ಇತರ ಸೇವೆಗಳು	ರಾಜಸ್ವ	1,000	...	1,000
17	ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು	ರಾಜಸ್ವ	4,81,00,000	...	4,81,00,000
19	ಸಣ್ಣ ಉಳಿತಾಯ	ರಾಜಸ್ವ	20,25,000	...	20 25,000
20	ವಿವಿಧ ಸಾಮಾನ್ಯ ಸೇವೆಗಳು	ರಾಜಸ್ವ	11,51,000	...	11,51,000
21	ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು	ರಾಜಸ್ವ	86,00,000	...	86,00,000
		ಬಂಡವಾಳ	2,33,00,000	...	2,33,00,000
22	ಅರಣ್ಯ	ರಾಜಸ್ವ	20,53,000	...	20,53,000
24	ವಾಹನಗಳ ಮೇಲೆ ತೆರಿಗೆಗಳು	ರಾಜಸ್ವ	11,81,000	...	11,81,000

1	2		3	4	5
25	ಪೋಲೀಸು ಮತ್ತು ಅಗ್ನಿಶಾಮಕ ಸೇವೆಗಳು	ರಾಜಸ್ವ	40,00,000	...	40,00,000
27	ಪ್ರವಾಸೋದ್ಯಮ, ವಾರ್ತಾ ಮತ್ತು ಪ್ರಚಾರ.	ರಾಜಸ್ವ	7,12,000	...	7,12,000
29	ವೈದ್ಯಕೀಯ ಸೇವೆಗಳು ಮತ್ತು ಕುಟುಂಬ ಕಲ್ಯಾಣ.	ರಾಜಸ್ವ	1,35,00,000	...	1,35,00,000
30	ಜನಾರೋಗ್ಯ	ರಾಜಸ್ವ	5,62,16,000	...	5,62,16,000
32	ನಗರಾಭಿವೃದ್ಧಿ ಇತ್ಯಾದಿ	ರಾಜಸ್ವ	4,10,00,000	...	4,10,00,000
34	ಸಣ್ಣ ನೀರಾವರಿ	ರಾಜಸ್ವ	3,63,96,000	13,000	3,64,09,000
		ಬಂಡವಾಳ	1,55,00,000	35,56,000	1,90,56,000
35	ನೀರಾವರಿ, ಜಲಸಂಚಾರಿ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ	ರಾಜಸ್ವ	65,00,000	...	65,00,000
	ಯೋಜನೆಗಳು	ಬಂಡವಾಳ	12,25,10,000	1,95,70,000	14,20,80,000
36	ರಾಜ್ಯ ವಿಧಾನ ಮಂಡಲ	ರಾಜಸ್ವ	43,59,000	...	43,59,000
37	ನ್ಯಾಯಾಡಳಿತ	ರಾಜಸ್ವ	25,69,000	...	25,69,000
38	ಜುನಾಮಣಿಗಳು	ರಾಜಸ್ವ	22,50,000	...	22,50,000
39	ರಾಜ್ಯಪಾಲರು, ಸಚಿವರು ಮತ್ತು ಲೋಕಸೇವಾ ಆಯೋಗ	ರಾಜಸ್ವ	6,00,000	2,60,000	8,60,000
40	ಸಚಿವಾಲಯ	ರಾಜಸ್ವ	6,00,000	...	6,00,000
41	ಜಿಲ್ಲಾಡಳಿತ	ರಾಜಸ್ವ	10,00,000	...	10,00,000
42	ಮುಖ್ಯ ಮಂತ್ರಿಗಳ ವಿವಿಧ ಅಭಿಯಾಚನೆ	ರಾಜಸ್ವ	11,75,000	5,00,000	16,75,000
44	ಲೋಕೋಪಯೋಗಿ ಕಾಮಗಾರಿಗಳು (ನಿರ್ಮಾಣವನ್ನು ಹೊರತುಪಡಿಸಿ)	ರಾಜಸ್ವ	22,00,01,000	...	22,00,01,000

1	2		3	4	5
45.	ಕಟ್ಟಡಗಳು	ರಾಜಸ್ವ	3,000	9,52,000	9,55,000
		ಬಂಡವಾಳ	8,000	62,000	70,000
46	ರಸ್ತೆಗಳು ಮತ್ತು ಸೇತುವೆಗಳು	ರಾಜಸ್ವ	1,60 78,000	...	1,60,78,000
		ಬಂಡವಾಳ	36,03,000	44,000	36,47,000
48	ವಿದ್ಯುತ್ ಯೋಜನೆಗಳು	ರಾಜಸ್ವ	25,00,000	...	25,00,000
49	ಭೂ ಕಂದಾಯ, ಇತ್ಯಾದಿ	ರಾಜಸ್ವ	32,28,000	25,03,000	57,31,000
51	ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ	ರಾಜಸ್ವ	4,05,00,000	...	4,05,00,000
55	ಸಹಕಾರ (ಕ್ರಮಪಡಿಸಿದ ಮೊರುಕಟ್ಟೆ ಗಳನ್ನು ಹೊರತುಪಡಿಸಿ)	ರಾಜಸ್ವ	8,01,000	...	8,01,000
		ಬಂಡವಾಳ	1,36,86,000	...	1,36,86,000
57	ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವ್ಯವಸ್ಥೆ ಆದಾಯ	ರಾಜಸ್ವ	17.58.00,000	83,000	17,58,83,000
58	ಸಮುದಾಯ ಅಭಿವೃದ್ಧಿ	ರಾಜಸ್ವ	56,10,000	...	56,10,000
59	ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ	ರಾಜಸ್ವ	88,00,000	...	88,00,000
60	ಗ್ರಾಮೀಣ ಉದ್ಯೋಗ ಯೋಜನೆಗಳು	ರಾಜಸ್ವ	61.80,00,000	...	61,80,00,000
61	ಕಾರ್ಮಿಕ ಮತ್ತು ಉದ್ಯೋಗ	ರಾಜಸ್ವ	3,30,00,000	...	3,30,00,000
62	ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ	ರಾಜಸ್ವ	1,75,70.000	...	1,75,70,000
		ಬಂಡವಾಳ	1,00.00,000	...	1,00,00,000
64	ಸಮಾಜ ಕಲ್ಯಾಣ	ರಾಜಸ್ವ	8.65,00.000	...	8,65,00,000
	ಒಟ್ಟು ಜುಮ್ಲಾ		198,62,40,000	2,75,76,000	201,38,16,000

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1985-86ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಆಗತ್ಯವಿರುವ ಹಣವನ್ನು ರಾಜ್ಯದ ಸಂಚಿತ ನಿಧಿಯೊಳಗಿಂದ ವಿನಿಯೋಗಿಸಲು ಭಾರತ ಸಂವಿಧಾನದ 205 ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ರಾಮಕೃಷ್ಣ ಹೆಗಡೆ,
ಮುಖ್ಯಮಂತ್ರಿ

ಕೆ. ಎಸ್. ಸಿಂಗ್ರಿಗೌಡ,
ಕಾರ್ಯದರ್ಶಿ